# ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಸಂಸೋನನು ದೇವರ ಬಲವುಳ್ಳ ಮನುಷ್ಯ

ಬರಹಗಾರರು: Edward Hughes

ಚಿತ್ರಲೇಖಕರು: Janie Forest; Alastair Paterson

ಅಳವಡಿಸುವವರು: Lyn Doerksen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಬಹಳ ವರ್ಷಗಳ ಹಿಂದೆ ಇಸ್ರಾಯೇಲ್ ದೇಶದಲ್ಲಿ ಮನೋಹ ಎಂಬ ಮನುಷ್ಯನಿದ್ದನು, ಆತನಿಗೆ ಮಕ್ಕಳಿರಲಿಲ್ಲ. ಒಂದು ದಿನ ದೇವ ದೂತನು ಆತನ ಹೆಂಡತಿಗೆ ಪ್ರತ್ಯಕ್ಷನಾಗಿ ‘ಒಂದು ವಿಷೇಶವಾದ ಮಗು ಹುಟ್ಟುವುದಕ್ಕಿದೆ’ ಎಂದು ಹೇಳಿದನು.



ಅವನ ಹೆಂಡತಿಯು ತನ್ನ ಗಂಡನಾದ ಮನೋಹನಿಗೆ ಒಳ್ಳೆಯ ಸಂದೇಶವನ್ನು ಕೊಟ್ಟಳು, ಆಗ ಮನೋಹನು ಮಗುವನ್ನು ಹೇಗೆ ಬೇಳಸಬೇಕೆಂದು ದೇವರನ್ನು ಪ್ರಾರ್ಥಿಸಿದನು.





ದೇವರು ಮನೋಹನಿಗೆ ಹೇಳಿದ್ದೆನೆಂದರೆ ನಿನಗೆ
ಹುಟ್ಟುವಂತ ಮಗುವಿನ ಕೂದಲುಗಳನ್ನು
ಕತ್ತರಿಸಬಾರದು, ಅಮಲು ಬರುವಂತ
ಯಾವ ಪಾನಿಯವನ್ನು ಸ್ವಿಕರಿಸಬಾರದು, ನಿಶಿದ್ಧ
ಪದಾರ್ಥವನ್ನು ತಿನ್ನಬಾರದು ಅವನು ಇಸ್ರೆಯೇಲ್
ದೇವರಿಗೆ ಪ್ರತಿಷ್ಠಿತನಾಗಿರುವನು.
ಮತ್ತು ಅವನು
ಇಸ್ರೆಯೇಲ್
ಜನರಿಗೆ ನ್ಯಾಯವನ್ನು
ತೀರಿಸುವವನಾಗಿರುತ್ತಾನೆ.





ದೇವ ಜನರು ದೇವರಿಂದ ದೂರವಾಗುವಾಗ ಅವರಿಗೆ ಸಹಾಯ ಅಗತ್ಯವಿರುತ್ತದೆ. ಅವರು ಫಿಲಿಷ್ಟಿಯನ್ನರಿಂದ ಬಾದಿಸಲ್ಪಡುವಾಗ ದೇವರಿಗೆ ಮೊರೆ ಇಟ್ಟರು ದೇವರು ಅವರ ಮೊರೆಯನ್ನು ಕೇಳಿ ಈ ಮಗುವನ್ನು ಕೊಟ್ಟನು. ಈ ಮಗುವು ಲೋಕದಲ್ಲಿಯೇ ಬಲಶಾಲಿಯಾದ ಮಗುವಾಗಿರುತ್ತದೆ.



ಅವಳು ಗರ್ಭವತಿಯಾಗಿ
ಮಗುವನ್ನು ಹೆತ್ತು
ಅವನಿಗೆ ಸಂಸೋನನೆಂದು
ಹೆಸರಿಟ್ಟಳು. ಆತನು ದೇವರ
ಅಶಿರ್ವಾದದಲ್ಲಿಯೂ
ಮತ್ತು ದೇವರ ಆತ್ಮನಿಂದ
ತುಂಬಿದವನಾಗಿ ಬೆಳೆದು
ಬಲಶಾಲಿಯಾದನು. ಒಂದು
ದಿನ ಸಿಂಹದ ಬಾಯನ್ನು
ಹಿಸಿದು ಅದನ್ನು ಕೊಂದನು.



ಸತ್ತ ಸಿಂಹದೊಳಗೆ ಜೇನು ಕಟ್ಟಿರುವಂತ ಗೂಡಿನಿಂದ
ಜೇನುನೋಣಗಳನ್ನು ಒಡಿಸಿ ಅದರಿಂದ ಜೇನುತುಪ್ಪವನ್ನು ತಿಂದನು.



“ತಿಂದುಬಿಡುವಂಥದರಿಂದ ತಿನ್ನತಕ್ಕದು
ಕ್ರೂರವಾದದ್ದರಿಂದ ಮದುರವಾದದ್ದು ಸಿಕ್ಕಿತು”
ಎಂದು ಒಂದು ಒಗಟನ್ನು ರಚಿನಿ ಹೇಳಿದನು.



ಯಾರಿಗೂ ಇದರ ಆರ್ಥ
ತಿಳಿಯಲಿಲ್ಲ. ಸಂಸೋನನಿಗೆ ಮಾತ್ರ ಗೊತ್ತಿತ್ತು.
ಪಿಲಿಷ್ಟಿಯನ್ನರಲ್ಲಿರುವ ಅವನ ಹೆಂಡತಿಯ ತನ್ನ
ಸ್ನೇಹಿತರಿಗೆ ಹೇಳಿದಾಗ, ಸಂಸೋನನಿಗೆ ಬಹಳ ಸಿಟ್ಟು ಬಂತು.

ಫಿಲಿಷ್ಟಿಯನ್ನರಲ್ಲಿರುವ ಅವನ ಹೆಂಡತಿಯಾಗಲಿಕ್ಕಿರುವವಳನ್ನು ಮತ್ತೊಬ್ಬ ಸ್ನೇಹಿತನಿಗೆ ಕೊಡುವಾಗ ಸಂಸೋನನಿಗೆ ಇನ್ನೂ ಬಹಳ ಸಿಟ್ಟು ಬಂತು. ಆದುದ್ದರಿಂದ ಅದಕ್ಕೆ ಬದಲಾಗಿ ಹೇಗೆ ಮುಯ್ಯಿ ತಿರಿಸಬೇಕೆಂದು ಯೋಚಿಸಿದನು. ಮೊದಲು ೩೦೦ ನರಿಗಳನ್ನು ಹಿಡಿದು ಅವುಗಳ ಎರಡು ಎರಡು ಬಾಲಗಳನ್ನು ಸೇರಿಸಿ ಬೆಂಕಿ ಹಚ್ಚಿದನು.



ಫಿಲಿಷ್ಟಿಯನ್ನರ ಹೊಲಗಳಿಗೆ ಬಿಟ್ಟನು.



ಫಿಲಿಷ್ಟಿಯನ್ನರು ಅದಕ್ಕೆ ಬದಲಾಗಿ ಮುಯ್ಯಿ ತಿರಿಸುವುದಕ್ಕೆ ಕಾಯುತ್ತಿರುವಾಗ ಸಂಸೋನನು ತಾನಗೇ ಸಿಕ್ಕಿಬಿದ್ದನು. ಆಗ ಅವರು ಅವನನ್ನು ಕಟ್ಟಿ ಕೊಲ್ಲುವುದಕ್ಕೆ ನೋಡುತ್ತಿದ್ದರು.



ತಕ್ಷಣವೇ ದೇವರ ಆತ್ಮನು ಸಂಸೋನನ ಮೇಲೆ ಬಂದಾಗ ಅವನು ಆ ಹಗ್ಗವನ್ನು ಹರಿದುಕೊಂಡು ಅಲ್ಲಿ ಬಿದ್ದಿರುವಂತ ಕತ್ತೆಯ ದವಡೆಯನನ್ನು ತಗೆದು ಅದರಿಂದ ೧೦೦೦ ಜನರನ್ನು ಕೊಂದನು.



ಪಿಲಿಷ್ಟಿಯನ್ನರು ಸಂಸೋನನನ್ನು ಪಟ್ಟವನ್ನಲಾ ಹುಡಿಕಿದರು ಆಗ ಅವನು ರಾತ್ರಿಯಲ್ಲಿ ಸಿಕ್ಕಿ ಬಿದ್ದನು. ಅವನನ್ನು ಪಟ್ಟಣ ದೊಳಗಿಟ್ಟು ಪಟ್ಟಣದ ಬಾಗಿಲಿಗೆ ಬೀಗವನ್ನು ಹಾಕಿದರು. ಆದರೆ ಸಂಸೋನನನು ಅದರ ಬಾಗಿಲನ್ನು ಕಿತ್ತು ಹೆಗಲಿನ ಮೇಲಿಟ್ಟುಕೊಂಡು ಬಂದನು.



ಸಂಸೋನನನು ದೇವರಿಗೆ ವಿಧೇಯನಾದಂತಲ್ಲಾ ದೇವರು ಅವನನ್ನು ಬಲ ಪಡಿಸಿದನು, ಆದರೆ ಒಂದು ದಿನ ತನಗೆ ಶಕ್ತಿ ಎಲ್ಲಿಂದ ಬರುತ್ತದೆ ಎಂದು ತನ್ನ ರಹಸ್ಯವನ್ನು ದೆಲೀಲಳ ಸಂಗಡ ಹೇಳಿದನು. ಅವಳು ಫಿಷ್ಟಿಯನ್ನರನ್ನು ಕರೆದು ವಿಷಯವನ್ನು ತಿಳಿಸಿದಳು. ಅವರು ಬಂದು ಅವನು ಮಲಗಿರುವಾಗ ಅವನ ಕೂದಲುಗಳನ್ನೆಲ್ಲಾ ಕತ್ತರಿಸಿದರು.





ಫಿಲಿಷ್ಟಿಯನ್ನರ ಸೈನಿಕರು
ದೆಲೀಲಳ ಮಲಗುವ
ಕೋಣೆಯೊಳಗೆ ಹೋಗಿ
ಸಂಸೋನನನ್ನು ಹಿಡಿದರು
ಆದರೆ ಅವನು ಕೊಸರಾಡಿದನು
ದೇವರ ಶಕ್ತಿ ಅವನನ್ನು
ಬಿಟ್ಟುಹೋಗಿತ್ತು. ಆತನ
ವೈರಿಗಳು ಆತನ ಕಣ್ಣುಗಳನ್ನು
ಕಿತ್ತು ಹಾಕಿದರು.



ದೇವರ ಸೇವಕನಾದ
ಸಂಸೋನನು ಕುರುಢನಾಗಿ
ಮತ್ತು ಬಲಹೀನನಾದುದ್ದರಿಂದ
ಫಿಲಿಷ್ಟಿಯನ್ನರು ಅವನನ್ನು
ನೋಡಿ ಪರಿಹಾಸ್ಯಮಾಡಿದರು.

ಫಿಲಿಷ್ಟಿಯನ್ನರು ತಮ್ಮ ದಾಗೂನ್ ದೇವರಿಗೆ ಬಲಿಕೊಡುವುದಕ್ಕಾಗಿ ಸಂಸೋನನನ್ನು ತಂದರು. ಆ ದಾಗೂನ್ ದೇವಾಲದಲ್ಲಿ ಅವರು ಕುಡಿದು ಕುಪ್ಪಳಿಸಿದರು ಅಲ್ಲಿಗೆ ಸಂಸೋನನನ್ನು ಕರೆದು ತಂದರು.



ಆಗ ಒಬ್ಬ ಹುಡುಗನು ಸಂಸೋನನನ್ನು ಆ ಸ್ಥಳಕ್ಕೆ ಕರದುಕೊಂಡು ಬಂದನು. ಆ ದೇವಾಲಕ್ಕೆ ಆದಾರವಾಗಿರುವ ಕಂಬದ ಹತ್ತಿರ ನಿಲ್ಲಿಸಿದನು, ಅಲ್ಲಿ ೩೦೦೦ ಜನರಿಗಿಂತ ಸಾಕಷ್ಟು ಜನರಿದ್ದರು. ಆ ದೇವಾಲಯದಲ್ಲಿ ಅವರೆಲ್ಲರು ಆತನನ್ನು ಪರಿಹಾಸ್ಯಮಾಡುತ್ತಿದ್ದರು.



ಸಂಸೋನನ ಕೂದಲುಗಳು ಬೆಳೆಯುತ್ತ ಬಂತು ಆಗ ಆತನು ಕರ್ತನೆ ಇವರು ಕಿತ್ತು ಹಾಕಿರುವ ನನ್ನ ಕಣ್ಣಿಗೆ ಬದಲಾಗಿ ಮುಯ್ಯಿ ತೀರಿಸುವಂತೆ ನನ್ನನ್ನು ಇನ್ನೊಂದು ಸಾರಿ ಬಲಪಡಿಸು ಎಂದು ಪ್ರಾರ್ಥಿಸಿದನು.





ಮತ್ತೆ ದೇವರು ಆತನನ್ನು ಬಲಪಡಿಸುವನಾ? ದೇವರು ಸಂಸೋನನನ್ನು ಬಲಪಡಿಸಿದಾಗ ಆತನು ಆಸಾದ್ಯವಾದ ಕಾರ್ಯವನ್ನು ಮಾಡಿದನು. ಆಗ ಸಂಸೋನನನು ತಾನು ಒರಗಿಕೊಂಡಿದ್ದ ಕಂಬವನ್ನು ತಳ್ಳಿದನು ಸಾವಿರಾರು ಜನರು ಆತನೊಂದಿಗೆ ಸತ್ತರು.

# ಸಂಸೋನನು ದೇವರ ಬಲವುಳ್ಳ ಮನುಷ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ನ್ಯಾಯ ಸ್ಥಾಪಕರು 13–16

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16